
ಅವಳ ಜೊತೆಗಿರಬೇಕು. ಮನೆಗೆಲಸದಲ್ಲಿ ಅವಳಿಗೆ ಸಹಾಯ ಮಾಡಬೇಕೆಂದು ನಿರ್ಧರಿಸಿಕೊಂಡೆ. ನನ್ನ ಮನಸ್ಸಿನ ಭಿತ್ತಿಯಿಂದ ಮಾಯವಾಗಿದ್ದ ಹೇಮಾವತಿಯ ಭಗ್ನ ಪ್ರೇಮಪ್ರಕರಣಕ್ಕೆ ಜೀವ ನೀಡಿ ಅದು ಭ್ರಮೆಯಿಂದ ಜಾರಿ ಬದುಕಿನ ವಾಸ್ತವದ ತೆಕ್ಕೆಯೊಳಗೆ ಬಿದ್ದಿರುವುದನ್ನು ಅರಿಯಲು ಕಾರಣನಾದ ಗಿರಿಧರ ಎಂಬ ಆಗಂತುಕನನ್ನು ನೆನೆದು ನನಗೆ ಅಪರಾಧಿ ಪ್ರಜ್ಞೆಯೊಂದು ಕಾಡತೊಡಗಿತ್ತಲ್ಲದೇ ಅವನ ಬಗ್ಗೆ ತೀವ್ರವಾದ ಅನುಕಂಪ ವೊಂದು ನನ್ನ ಮನದಾಳದಲ್ಲಿ ಮೂಡಿ ನಿಂತಿತ್ತು. ಅವನು ಯಾವುದೋ ಸದುದ್ದೇಶಕ್ಕಾಗಿಯೇ ನನ್ನನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿರಬಹುದು.. ಅವನೊಬ್ಬ ಸಂಕೋಚ ಪ್ರವೃತ್ತಿಯನಾಗಿರಬಹುದು.. ಅದಕ್ಕಾಗಿಯೇ ನನಗೆ ಫೋನನ್ನೂ ಮಾಡದೇ ಮನೆಯ ಬಳಿ ಬಂದು ಹೋಗುತ್ತಿರಬಹುದು ಎನಿಸಿ ಅವನ ಬಗ್ಗೆ ವಿನಾಕಾರಣ ತಪ್ಪು ತಿಳಿದದ್ದಕ್ಕಾಗಿ ಅಗಾಧ ಬೇಸರವೂ ಆಯಿತು.

ಅವನು ಭಾನುವಾರ ಬರುತ್ತೇನೆಂದು ಶರಧಿಯ ಬಳಿ ಹೇಳಿ ಹೋಗಿದ್ದು ನೆನಪಾಗಿ ಭಾನುವಾರ ಬೆಳಗಿನಿಂದ ಎಲ್ಲಿಯೂ ಮನೆ ಬಿಟ್ಟು ಹೊರಗೆ ಹೋಗದೆ ಅವನಿಗಾಗಿಯೇ ಕಾದು ಕುಳಿತೆ. ಆದರೆ ಆಸಾಮಿ ಸಂಜೆ ಐದು ಗಂಟೆಯಾದರೂ ಬರಲೇ ಇಲ್ಲ. ನನಗೂ ಅವನ ದಾರಿಯನ್ನು ಕಾಯ್ದು ಸಾಕಾಗಿತ್ತು. ತಕ್ಷಣವೇ ಆವಲಹಳ್ಳಿ ಆರನೆಯ ಕ್ರಾಸಿನಲ್ಲಿ ಮನೆ ಎಂದು ಶರಧಿಯ ಬಳಿ ಅವನು ಹೇಳಿದ್ದುದು ನೆನಪಾಗಿ ಒಮ್ಮೆ ನೋಡಿಯೇ ಬರೋಣ.. ಆ ರಸ್ತೆಯಲ್ಲಿ ಗಿರಿಧರ ಎಂಬ ಹೆಸರನ್ನು ತಿಳಿಸಿ ಯಾರನ್ನಾದರೂ ವಿಚಾರಿಸೋಣ.. ಸಿಕ್ಕಿದರೆ ಅವನ ವೃತ್ತಾಂತವೇನೆಂದು ತಿಳಿಯೋಣ ಎನಿಸಿ ಕುಳಿತಿದ್ದವನು ದಿಗ್ಗನೆದ್ದೆ.

'ಶರೂ.. ಒಂದರ್ಧ ಗಂಟೆ.. ಇಲ್ಲಿಯೇ ಹೊರಗೆ ಹೋಗಿ ಬರುತ್ತೇನೆ..' ಎಂದು ಶರಧಿಗೆ ತಿಳಿಸಿ ಅಪರೂಪಕ್ಕೆ ನಾನು ಉಪಯೋಗಿಸುತ್ತಿದ್ದ ನನ್ನ ಹಳೆಯ ಪಲ್ಸರ್ ಬೈಕಿನಲ್ಲಿ ಹೊರಟೆ. ಆವಲಹಳ್ಳಿ ಆರನೆಯ ಕ್ರಾಸಿಗೆ ಬಂದವನು ಅದೇ ರಸ್ತೆಯಲ್ಲಿ ಬೈಕನ್ನು ನಿಧಾನವಾಗಿ ನಡೆಸಿಕೊಂಡು ಮುಂದೆ ಹೋದೆ. ಅದೊಂದು ಸಾಮಾನ್ಯ ಜನ ವಾಸಿಸುವ ರಸ್ತೆಯಾಗಿತ್ತು. ತುಸು ದೂರ ತೆರಳಿದ ಮೇಲೆ ರಸ್ತೆಯ ಬದಿಯಲ್ಲೇ ಹೋಗುತ್ತಿದ್ದ ನನಗೆ ಒಂದಸ್ತಿನ ಕಟ್ಟಡದ ಮನೆಯೊಂದರ ಗೋಡೆಗೆ ಹೊಂದಿಕೊಂಡಿದ್ದ ಮೇಲಂತಸ್ತಿಗೆ ಹೋಗುವ ಮೆಟ್ಟಿಲುಗಳ ಕೆಳಗೆ ಬಿಳಿಯ ಹೊಂಡಾ ಆಕ್ಟೀವಾ ಸ್ಕೂಟರೊಂದು ನಿಂತಿದ್ದುದು ಕಾಣಿಸಿತು. ತಕ್ಷಣವೇ ಅವರು ಬಿಳಿಯ ಹೊಂಡಾ ಆಕ್ಟೀವಾ ಸ್ಕೂಟರಿನಲ್ಲಿ ಬಂದಿದ್ದರು.. ಎಂದು ಶರಧಿ ಹೇಳಿದ್ದುದು ಥಕ್ಕನೆ ಮಿಂಚಿನಂತೆ ಹೊಳೆದು ನೆನಪಾಯಿತು. ಇದೇ ಮನೆಯಿರಬಹುದೇನೋ.. ಎನಿಸಿತಾದರೂ ಮನೆಯ ಸುತ್ತಮುತ್ತ ಯಾರೂ ಕಾಣಿಸಲಿಲ್ಲವಾಗಿ ಒಳಗೆ ಹೋಗೋಣವೋ ಬೇಡವೋ ಎಂಬುದನ್ನು ನಿರ್ಧರಿಸಲಾಗದೆ ತೀವ್ರ ಗೊಂದಲವಾಯಿತು. ಯಾರಾದರೂ ಕಾಣಿಸುವರೇನೋ ಎಂದುಕೊಂಡು ಆ ಮನೆಯ ಮುಂದೆಯೇ ಮೂರ್ನಾಲ್ಕು ಬಾರಿ ಅತ್ತಲಿಂದ ಇತ್ತ, ಇತ್ತಲಿಂದ ಅತ್ತ ಬೈಕನ್ನು ತಿರುಗಿಸಿಕೊಂಡು ತಿರುಗಾಡಿದೆ.

ಅಷ್ಟರಲ್ಲಿ ಗಿಡ್ಡ ತಲೆಕೂದಲು, ದಪ್ಪಮೀಸೆ, ಬಿಳಿಯ ಹಾಫ್ ಶರ್ಟ್, ಖಾಕಿ ಪ್ಯಾಂಟು ಧರಿಸಿದ್ದ ಕಟ್ಟುಮಸ್ತಾದ ವ್ಯಕ್ತಿಯೊಬ್ಬ ನನ್ನತ್ತಲೇ ಬಿರುಸಾಗಿ ನಡೆದುಬಂದ. ಅವನು ಎಲ್ಲಿಂದ ಬಂದನೋ ತಿಳಿಯಲಿಲ್ಲ. ಅವನು ಹತ್ತಿರ ಬಂದವನೇ ನನ್ನ ಬೈಕಿಗೆ ಕೈ ಅಡ್ಡ ಹಿಡಿದು ತಡೆ ಹಾಕಿ,

'ಯಾರ್ರೀ ನೀವು..? ನಡೀರ್ರೀ ಸ್ಟೇಷನ್ನಿಗೆ..' ಎಂದು ಗಡುಸಾಗಿ ಗದರಿದ. ಒಂದು ಕ್ಷಣ ನನಗೆ ಗಾಬರಿಯಾಯಿತು. ತಕ್ಷಣವೇ ಸಾವರಿಸಿಕೊಂಡವನು ಬೈಕನ್ನು ನಿಲ್ಲಿಸಿ ಆ ವ್ಯಕ್ತಿಯನ್ನು ಆಪಾದಮಸ್ತಕವಾಗಿ ಒಮ್ಮೆ ನೋಡಿದೆ.




## ಸಾಕು-ಬೇಕು

ಸತ್ಯಕ್ಕೆ
ಕಣ್ಣೇ ಸಾಕು
ಸುಳ್ಳಿಗೆ
ಬುದ್ಧಿ ಬೇಕು

★ ಎಸ್.ಓಂಕಾರಯ್ಯ ತವನಿಧಿ

ಅವನು ಮಫ್ತಿಯಲ್ಲಿರುವ ಪೊಲೀಸನೆಂಬುದು ತಿಳಿಯಿತು. ನಮಸ್ಕಾರ ಸಾರ್.. ಎಂದು ಪ್ರಾರಂಭಿಸಿ ನನ್ನ ಕಾರ್ಖಾನೆ, ನನ್ನ ಹುದ್ದೆ, ನನ್ನ ಹೆಸರು ಎಲ್ಲವನ್ನೂ ತಿಳಿಸಿ ಇಲ್ಲಿ ಯಾರನ್ನೋ ನೋಡಬೇಕಿತ್ತು.. ವಿಳಾಸ ಸರಿಯಾಗಿ ತಿಳಿದಿಲ್ಲ.. ಅದಕ್ಕೇ ಹುಡುಕುತಿದ್ದೆ.. ಎಂದು ವಿನಯಪೂರ್ವಕವಾಗಿ ಹೇಳಿದೆ. ನಾನು ಕೊಟ್ಟ ಗೌರವದಿಂದ ಅವನಿಗೂ ಖುಷಿಯಾಗಿರಬೇಕು..

'ಸಾರ್.. ನೀವು ಪೇಪರ್ ಓದಿಲ್ಲವಾ..? ಎರಡು ದಿನದ ಹಿಂದೆ ಈ ಮನೆಯಲ್ಲಿದ್ದ ಒಂಟಿ ಮುದುಕಿಯನ್ನು ಯಾರೋ ಕೊಲೆ ಮಾಡಿ ಚಿನ್ನಾಭರಣಗಳನ್ನ ದೋಚಿಕೊಂಡು ಹೋಗಿದ್ದಾರೆ.. ಇಲ್ಲಿ ಹೀಗೆ ಅನುಮಾನಾಸ್ಪದವಾಗಿ ಸುಳಿದಾಡುವುದು ಒಳ್ಳೆಯದಲ್ಲ.. ಹೊರಟು ಹೋಗಿ..' ಎಂದು ತುಸು ಗತ್ತಿನಲ್ಲಿಯೇ ಆದೇಶಿಸಿದ.

'ಸರಿ ಸಾರ್..' ಎಂದವನೇ ಮತ್ತೆ ಹಿಂತಿರುಗಿ ನೋಡದೇ ನನ್ನ ಮನೆಯ ದಾರಿ ಹಿಡಿದೆ. ಈ ಗಿರಿಧರ ಎನ್ನುವ ಆಗಂತುಕನ ವಿಷಯದಲ್ಲಿ ಎಲ್ಲವೂ ಗೊಂದಲಮಯವಾಗತೊಡಗಿತು. ಈ ಬಾರಿ ಅವನು ನನ್ನನ್ನು ಹುಡುಕಿಕೊಂಡು ಬಂದಾಗ ನನಗೆ ಫೋನು ಮಾಡಿ ತಿಳಿಸು.. ಅವನೊಂದಿಗೆ ಫೋನಿನಲ್ಲಿ ನಾನೇ ಮಾತನಾಡುತ್ತೇನೆ ಎಂದು ಶರಧಿಗೆ ಹೇಳಿದರಾಯಿತು ಎಂದು ನಿರ್ಧರಿಸಿಕೊಂಡು ಮನೆಗೆ ಬಂದೆ. ಮನಸ್ಸಿನಲ್ಲಿ ಯಾಕೆಂದು ನಿಖರವಾಗಿ ತಿಳಿಯದ ಬೇಸರವೊಂದು ಕಾಡುತಿತ್ತು. ಬಾಗಿಲು ತೆಗದ ಶರಧಿಗೆ,

'ಶರೂ.. ಯಾವುದಾದ್ರೂ ಪಿಕ್ಚರ್‌ಗೆ ಹೋಗಿ ಬರೋಣ ರೆಡಿಯಾಗು..' ಎಂದೆ. ಸಾಮಾನ್ಯವಾಗಿ ನಾನು ಸಿನೆಮಾ ನೋಡುವುದು ಬಹಳ ಅಪರೂಪವೇ. ಶರಧಿಗೆ ಆಶ್ಚರ್ಯವಾಗಿರಬೇಕು.. ಏನಪ್ಪಾ ಇದು.. ಬೇಸಿಗೆಯ ಕಾಲದಲ್ಲಿ ಬಿದ್ದ ಅನಿರೀಕ್ಷಿತ ಮಳೆಯಂತೆ.. ಎಂದು ಜೋರಾಗಿ ಉಲ್ಲಾಸದಿಂದ ನಕ್ಕವಳು ಬಟ್ಟೆ ಬದಲಿಸಲು ರೂಮಿಗೆ ತೆರಳಿದಳು.

* * *

ಮುಂದಿನ ಒಂದು ವಾರ ಕಾರ್ಖಾನೆಯಲ್ಲಿ ಯಾವುದೇ ಆತಂಕಗಳಿಲ್ಲದೆ ಕಳೆಯಿತು. ನಾನು ಪ್ರತಿದಿನವೂ ಆದಷ್ಟು ಬೇಗ ಮನೆ ತಲುಪಿ ಶರಧಿಯ ಜೊತೆಯಲ್ಲಿ ಹೆಚ್ಚು ಕಾಲವನ್ನು ಕಳೆಯತೊಡಗಿದೆ. ಅದರಿಂದ ಅವಳಿಗೂ ತುಂಬಾ ಖುಷಿಯಾಗಿತ್ತು. ಈ ಗಿರಿಧರ ಎನ್ನುವ ಆಗಂತುಕ ಮತ್ತೆ ಮನೆಯ ಬಳಿ ಬಂದಿರಲಿಲ್ಲ. ಅವನಿಗೆ ನನ್ನಿಂದ ತಿಳಿಯಬೇಕಾದ ಯಾವುದೋ ಮಾಹಿತಿ ಎಲ್ಲಿಂದಲೋ ಸಿಕ್ಕಿರಬಹುದು ಅಥವಾ ಆಗಬೇಕಾಗಿದ್ದ ಸಹಾಯ ಬೇರೆಯವರಿಂದ ಆಗಿರಬಹುದು ಎನಿಸಿ ಅವನ ನೆನಪು ನನ್ನ ಮನಸ್ಸಿನ ಭಿತ್ತಿಯಿಂದ ನಿಧಾನವಾಗಿ ಮಾಸಿಹೋಗಿತ್ತು.

ಆವತ್ತು ಭಾನುವಾರ. ಮನೆಯಲ್ಲಿಯೇ ಕುಳಿತು ಟೀವಿ ನೋಡಿಕೊಂಡು, ಶರಧಿಗೆ ಮನೆಗೆಲಸದಲ್ಲಿ ಸಣ್ಣಪುಟ್ಟ ಸಹಾಯ ಮಾಡಿಕೊಂಡು ಕಳೆದೆ. ಸಂಜೆಯಾಯಿತು. ಶರಧಿಯೊಂದಿಗೆ ಒಂದು ಸುತ್ತು ವಾಕಿಂಗ್ ಹೋಗಿ ಬರೋಣ ಎಂದುಕೊಂಡು ಸಿದ್ಧವಾಗುತಿದ್ದೆ. ನನ್ನ ವೈಯುಕ್ತಿಕ ಮೊಬೈಲ್ ಫೋನು ರಿಂಗಾಯಿತು. ನನ್ನ ಸ್ನೇಹಿತ ಸುಬ್ರಹ್ಮಣ್ಯ ಕರೆ ಮಾಡಿದ್ದ. ಅವನು ಈಗ ಕೆಲವು ದಿನಗಳ ಮುಂಚೆ ಕರೆ ಮಾಡಿದ್ದುದು, ಮೆಸೇಜಿಸಿದ್ದು ನೆನಪಾಯಿತು. ಈ ಬಾರಿ ಅವನೊಂದಿಗೆ ನಿರಾಳವಾಗಿ ಒಂದಷ್ಟು ಮಾತನಾಡೋಣ ಎನಿಸಿ ಕರೆ ಸ್ವೀಕರಿಸಿ ಹಲೋ ಸುಬ್ಬೂ ಎಂದೆ.

'ಏನು ಸಾಹೇಬರು ಈವತ್ತು ನನ್ನ ಫೋನು ರಿಸೀವ್ ಮಾಡೋವಷ್ಟು ದಯೆ ತೋರಿದ್ದೀರಿ..' ಎಂದು ಲಘುವಾಗಿ ಕುಟುಕಿದ.

'ಏನು ಮಾಡುವುದಪ್ಪಾ ದೊರೆಯೇ.. ನಮ್ಮ ಕೆಲಸವೇ ಅಂತಹುದು.. ಹೆಂಡತಿಯನ್ನು ಮುದ್ದಿಸುವುದಕ್ಕೂ ಕತ್ತಲಾಗುವುದನ್ನೇ ಕಾಯಬೇಕು..' ಎಂದು ಸಣ್ಣಗೆ ನಕ್ಕೆ. ಅವನು ಅತ್ತಲಿಂದ ಜೋರಾಗಿ ನಕ್ಕದ್ದು ಕೇಳಿಸಿತು.

'ಎಲ್ಲಿದೀಯೋ.. ಮನೆಗೆ ಬಾರೋ..' ಎಂದೆ.

'ಈಗ ಟೈಮಿಲ್ಲಾ ಕಣೋ.. ಎಂಟು ಗಂಟೆಗೆ ಹೈದರಾಬಾದಿನ ಬಸ್ಸು ಬುಕ್ ಮಾಡಿಸಿದ್ದೀನಿ.. ನೀನೇ ಮೆಜೆಸ್ಟಿಕ್ ಹತ್ತಿರ ಬಂದರೆ ಒಂದು ತಣ್ಣನೆಯ ಬಿಯರ್ ಕುಡಿದು ಸ್ವಲ್ಪ ಮಾತನಾಡಬಹುದು..' ಎಂದು ನನ್ನ ಉತ್ತರವನ್ನು ನಿರೀಕ್ಷಿಸಿದ. 'ಸರಿ ಬರ್ತೀನಿ.. ಎಲ್ಲಿಗೆ ಬರಬೇಕು ಹೇಳು..' ಎಂದೆ.

'ಅದೇ ಮಾಮೂಲು ಗೋಲ್ಡನ್ ಗೇಟ್ ಪಬ್..' ಎಂದ. ಸರಿ ಇನ್ನು ಇಪ್ಪತ್ತು ನಿಮಿಷದಲ್ಲಿ ಅಲ್ಲಿರ್ತೀನಿ.. ಎಂದು ಹೇಳಿ ಕರೆಯನ್ನು ಕಡಿತಗೊಳಿಸಿದೆ. ಹಿಂದೆ ನಿಂತು ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಶರಧಿ 'ಸರಿ ಹೋಗಿ ಬನ್ನಿ.. ' ಎಂದು ಮುಗುಳ್ನಕ್ಕು ಅನುಮತಿ ನೀಡಿದಳು. ಸುಬ್ರಹ್ಮಣ್ಯ ನಾವು